# 88 ಚಿಟ್ಟೆ!



ಪಾತರಗಿತ್ತಿ ಪಕ್ಕ ನೋಡಿದೇನಾ ಅಕ್ಕ... ಎಂದು ಹಾಡಿ ಕುಣಿಯದ ಮಕ್ಕಳಿಲ್ಲ. ಹಾಗೆ ವರ್ಣಿಸಿ ಹಾಡಲು ಪ್ರಮುಖ ಕಾರಣ ಪಾತರಗಿತ್ತಿಗಳ ಬಣ್ಣವಷ್ಟೇ ಅಲ್ಲ ಅವುಗಳ ಮೈಮೇಲಿನ ಚಿತ್ರವಿಚಿತ್ರ ವಿನ್ಯಾಸಗಳು ಎಂದರೆ ತಪ್ಪಲ್ಲ. ಒಂದಕ್ಕಿಂತ ಒಂದು ಅತ್ಯಾಕರ್ಷಕ ವಿನ್ಯಾಸದ ರೆಕ್ಕೆಗಳನ್ನು ಪಾತರಗಿತ್ತಿಗಳು ಹೊಂದಿರುವುದನ್ನು ನಾವು ಕಾಣಬಹುದು. ದಕ್ಷಿಣ ಅಮೆರಿಕದದ ಕೊಲಂಬಿಯಾದಲ್ಲೊಂದಷ್ಟು ಬಗೆಯ ಪಾತರಗಿತ್ತಿಗಳು ಕಂಡುಬರುತ್ತವೆ. ಅವುಗಳನ್ನು 89/98 ಚಿಟ್ಟೆಗಳೆಂದು ಕರೆಯಲಾಗುತ್ತದೆ. ಹಾಗೆ ಕರೆಯಲು ಪ್ರಮುಖ ಕಾರಣ ಅವುಗಳ ಮೈಮೇಲಿನ ರೆಕ್ಕೆಗಳು 89 ಮತ್ತು 98 ಎಂಬ ಸಂಖ್ಯೆಗಳನ್ನು ಪ್ರತಿನಿಧಿಸುವ ವಿನ್ಯಾಸವನ್ನು ಪ್ರದರ್ಶಿಸುವುದೇ ಆಗಿದೆ.

ಕೀಟಗಳ ವರ್ಗಕ್ಕೆ ಸೇರಿದ 'ಡೈಯೇಥ್ರಿಯಾ' ಪಂಗಡದ ಈ ಚಿಟ್ಟೆಗಳ ವೈಜ್ಞಾನಿಕ ಹೆಸರು 'ಡೈಯೇಥ್ರಿಯಾ ಫ್ಲೋಗಿಯೆ'. ಇವುಗಳಲ್ಲಿ ಒಟ್ಟು 12 ಪ್ರಬೇಧಗಳಿದ್ದು ಎಲ್ಲಾ ಪ್ರಬೇಧಗಳ ರೆಕ್ಕೆಗಳ ವಿನ್ಯಾಸವೂ 89 ಮತ್ತು 98 ಸಂಖ್ಯೆಗಳನ್ನೇ ತೋರಿಸುತ್ತದೆ. ಬಣ್ಣ, ಆಕಾರ ಹಾಗೂ ಗಾಢತೆಯಲ್ಲಷ್ಟೇ ವ್ಯತ್ಯಾಸವಿದೆ. ಅದರಲ್ಲಿಯೂ ಸುಮಾರು ಮೂರು ಪ್ರಬೇಧಗಳು ಮೆಕ್ಸಿಕೊದಲ್ಲಿಯೇ ಕಂಡುಬರುತ್ತವೆ. ಉಳಿದ ಪ್ರಬೇಧಗಳು ಅಮೆಜಾನ್ ಹಾಗೂ ಆಂಡೀಸ್‌ನುದ್ದಕ್ಕೂ ಯಥೇಚ್ಛವಾಗಿ ಕಂಡುಬರುತ್ತವೆ. ಚಿಟ್ಟೆಗಳ ಮೇಲ್ಭಾಗವು ಕಪ್ಪಾಗಿದ್ದರೂ ಮುಂಭಾಗದ ರೆಕ್ಕೆಗಳ ಮೇಲೆ ನೀಲಿ ಅಥವಾ ಹಸಿರು ಬಣ್ಣದ ಪಟ್ಟಿಗಳಿರುತ್ತವೆ. ಕೆಲವೊಂದು ಪ್ರಬೇಧಗಳಲ್ಲಿ ಈ ಪಟ್ಟಿಗಳು ಹಿಂದಿನ ರೆಕ್ಕೆಗಳಲ್ಲಿ ಕಂಡುಬರುತ್ತವೆ.

■ ಪ.ನಾ. ಹಳ್ಳಿ ಹರೀಶ್ ಕುಮಾರ್

